2016 ಕ.ತೀ.ವ 461

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

## ಪಿ. ರಾಜೇಶ್ವರಿ –ವಿರುದ್ಧ– ಶ್ರೀನಿವಾಸ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 – 115ನೇ ಪ್ರಕರಣ – ಪುನರೀಕ್ಷಣಾ ಅರ್ಜಿ ವಸ್ತು ವಿಷಯದ ಅಥವಾ ಕ್ಲೇಮಿನ ಭಾಗದ ಸಂಬಂಧದಲ್ಲಿ ಹೊಸ ದಾವೆ ಸಲ್ಲಿಸುವುದಕ್ಕೆ ಅನುಮತಿ ಪಡೆಯದೆ ದಾವೆಯನ್ನು ವಾಪಸ್ಸು ತೆಗೆದುಕೊಂಡಿರುವುದು – ಸುಸ್ಪಷ್ಟ ಕ್ಲೇಮನ್ನು ಮಾಡುವುದಕ್ಕಾಗಿ ವಾದಿಯಿಂದ ಎರಡನೇ ದಾವೆಯ ಹೂಡಿಕೆ – ಈ ದಾವೆಯು ಸಿವಿಲ್ ಪ್ರಕ್ರಿಯಾ ಸಂಹಿತೆಯ 23ನೇ ಕ್ರಮಾದೇಶದ 1ನೇ ನಿಯಮದ ಮೇರೆಗೆ ಪ್ರತಿಷೇದಿತವಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ಪ್ರಕರಣ ಮತ್ತು 2ನೇ ಕ್ರಮಾದೇಶದ 2ನೇ ನಿಯಮದೊಂದಿಗೆ ಓದಲಾದ ಸಿವಿಲ್ ಪ್ರಕ್ರಿಯಾ ಸಂಹಿತೆಯ 23ನೇ ಕ್ರಮಾದೇಶದ 1ನೇ ನಿಯಮದ ಮೇರೆಗೆ ಪ್ರತಿವಾದಿಗಳು / ಅರ್ಜಿದಾರರಿಂದ ಸಲ್ಲಿಸಲಾದ ಅರ್ಜಿಯ ವಜಾ – ಸದರಿ ವಜಾಗೊಳಿಸುವಿಕೆಯನ್ನು ಪ್ರಶ್ನಿಸಿ ಈ ಪುನರೀಕ್ಷಣಾ ಅರ್ಜಿಯನ್ನು 5ನೇ ಪ್ರತ್ಯರ್ಜಿದಾರಳಿಂದ ಸಲ್ಲಿಸಲಾಗಿದೆ.

ಪ್ರಸ್ತುತ ಪ್ರಕರಣದ ಉದ್ದೇಶಕ್ಕೆ ಸಂಬಂಧಿಸಿದಂತೆ, ವಾಸ್ತವಾಂಶಗಳನ್ನು ನಾವು ಪರಿಶೀಲಿಸಿದಲ್ಲಿ, ಮೊದಲ ದಾವೆಯನ್ನು ಸಹ, ಇದೇ ಸ್ವತ್ತುಗಳ ಸಂಬಂಧದಲ್ಲಿ ಆರಂಭಿಸಲಾಗಿದ್ದು ಆದರೆ ಪ್ರತ್ಯರ್ಜಿದಾರರೊಂದಿಗೆ ವಾದಿಗಳು ಎಲ್ಲಾ ಸ್ವತ್ತುಗಳ ಮೇಲಿನ ಜಂಟಿ ಕ್ಲೇಮನ್ನು ಒಳಗೊಂಡಿರುವಂಥ ಪಾಲನ್ನು ಕೋರಿರುವ ಸುಸ್ಪಷ್ಟ ಮತ್ತು ಪ್ರತ್ಯೇಕ ಪರಿಹಾರವನ್ನು ಕೋರಿರುವುದು ಸ್ಪಷ್ಟವಾಗುತ್ತದೆ. ವಾದಿಗಳು ಅವರ ಪಾಲಿನ ಭಾಗವನ್ನು ಕೋರಿರುತ್ತಾರೆ. ಎರಡನೇ ದಾವೆಗೆ ಸಂಬಂಧಪಡುವಷ್ಟರ ಮಟ್ಟಿಗೆ ವಾದಿಗಳು, ಪ್ರತ್ಯರ್ಜಿದಾರರೊಂದಿಗೆ ಸ್ವತ್ತಿನಲ್ಲಿನ ಭಾಗವನ್ನು ಕ್ಲೇಮು ಮಾಡದೆ, ಅವರು, ಸ್ವತ್ತುಗಳ ಮೇಲೆ ಅವರ ನಿರುಪಾಧಿಕ ಹಕ್ಕನ್ನು ಒತ್ತಿಹೇಳಿರುತ್ತಾರೆ. ಆದ್ದರಿಂದ, ದಾವೆಯ ವಸ್ತು ವಿಷಯವು, ಮಾಡಲಾದ ಕ್ಲೇಮಿನ ಭಾವದಲ್ಲಿ, ಕೋರಲಾದ ಪರಿಹಾರದ ಸ್ವರೂಪ ಮತ್ತು ಸದರಿ ಪರಿಹಾರದ ಅಥವಾ ಹಕ್ಕನ್ನು ಗುರುತು ಮಾಡಿರುವ ಆಧಾರದ ಮೇಲೆ, ಎರಡೂ ದಾವೆಗಳಲ್ಲಿ ರೂಪಿಸಿರುವ ದಾವೆ ಮತ್ತು ಕ್ಲೇಮಿನ ವಸ್ತು ವಿಷಯವು

*ಸಿವಿಲ್ ಪುನರೀಕ್ಷಣಾ ಅರ್ಜಿ ಸಂಖ್ಯೆ: 483/2013, ದಿನಾಂಕ: 10ನೇ ಆಗಸ್ಟ್, 2015.

ವಿಭಿನ್ನವಾಗಿರುವುದು ಸುಸ್ಪಷ್ಟವಾಗಿರುತ್ತದೆ. ಆದರೆ, ದಾವೆಯ ವಸ್ತು ವಿಷಯವನ್ನು ಎರಡೂ ದಾವೆಗಳಲ್ಲಿ ಒಳಗೊಂಡಿರುವ ಸ್ವತ್ತಿನ ಉಲ್ಲೇಖಕ್ಕೆ ವಿರುದ್ಧವಾದ ರೀತಿ ರೂಪಿಸಿದಲ್ಲಿ, ತರುವಾಯ ಇದು ಎರಡೂ ದಾವೆಗಳು ಒಂದೇ ವಸ್ತು ವಿಷಯಕ್ಕೆ ಸಂಬಂಧಿಸುತ್ತವೆಂಬ ಅರ್ಥವನ್ನು ಪಡೆಯುತ್ತದೆ.

ಈ ಸಂದರ್ಭವನ್ನು ನಿಭಾಯಿಸುವಾಗ, ಮಧ್ಯೆ ಬಂದ ವಾಸ್ತವಾಂಶಗಳು ಯಾವುವು ಮತ್ತು ವಾದಿ ಅವುಗಳಿಗೆ ಹೇಗೆ ತಕ್ಷಣದ ಪರಿಹಾರವನ್ನು ಕೋರಿದನು ಎಂಬುದನ್ನು ಅವಶ್ಯಕ ವಿವಾದಾಂಶಗಳನ್ನು ರೂಪಿಸಿಕೊಳ್ಳುವ ಮೂಲಕ ಅಧಿವಿಚಾರಣೆ ಸಮಯದಲ್ಲಿ ತನಿಖೆ ಮಾಡಲಾಯಿತು. ವಾಸ್ತವವಾಗಿ, ಪ್ರತಿವಾದಿಗಳು, ಎರಡನೇ ದಾವೆಯನ್ನು ಊರ್ಜಿತಗೊಳಿಸಿಕೊಳ್ಳಲು ಕಾನೂನು ನಿಷೇದವನ್ನು ಒತ್ತಿ ಹೇಳಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 2ನೇ ನಿಯಮದ II ಕ್ರಮಾದೇಶದಡಿಯಲ್ಲಿ ಒಳಗೊಂಡ ಉಪಬಂಧಗಳನ್ನು ಉಲ್ಲೇಖಿಸುವ ಮೂಲಕ ರಕ್ಷಣೆಯನ್ನು ಪಡೆದಿರುತ್ತಾರೆ. ಆದ್ದರಿಂದ ಅಧಿವಿಚಾರಣೆಯ ಸಮಯದಲ್ಲಿ ಈ ಸಂಬಂಧದಲ್ಲಿ ತೆಗೆದುಕೊಂಡ ಪ್ರತಿರಕ್ಷೆಯನ್ನು ಸುಸ್ಥಾಪಿಸಲು ಪ್ರತಿವಾದಿಗಳ ಹಕ್ಕಿಗೆ ಪೂರ್ವಾಗ್ರಹವಿಲ್ಲದೆ, ಈ ಅರ್ಜಿಯನ್ನು, ಅಧೀನ ನ್ಯಾಯಾಲಯವು ಹೊರಡಿಸಿರುವ ಆದೇಶವನ್ನು ಸ್ಥಿರೀಕರಿಸಿ ವಜಾಗೊಳಿಸಿರುತ್ತದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

1. *ಎಐಆರ್ 1959 ಕಲ್ಕತ್ತಾ 715 (ಸಂಪುಟ 46, (ಸಿ.200)(1)*
   *ಆಲ್ಬರ್ಟ್ ಜುಧಾ ಜುಧಾ –ವಿರುದ್ಧ–*
   *ರಾಂಪದ ಗುಪ್ತ ಮತ್ತು ಮತ್ತೊಬ್ಬರು* *(ಉಲ್ಲೇ) 7*
2. *(2000) 5 ಎಸ್‌ಸಿಸಿ 458*
   *ಕೆ.ಎಸ್. ಭೂಪತಿ ಮತ್ತು ಇತರರು –ವಿರುದ್ಧ–*
   *ಕೋಕಿಲ ಮತ್ತು ಇತರರು* *(ಉಲ್ಲೇ) 7*
3. *(1996) 11 ಎಸ್‌ಸಿಸಿ 167*
   *ಭಕ್ತವರ ಸಿಂಗ್ ಮತ್ತು ಮತ್ತೊಬ್ಬರು –ವಿರುದ್ಧ–*
   *ಸಾದಾ ಕೌರ್ ಮತ್ತು ಮತ್ತೊಬ್ಬರು* *(ಉಲ್ಲೇ) 8*

4. *(1987) 1 ಎಸ್‌ಸಿಸಿ 5*
*ಸರ್ಗುಜಾ ಟ್ರಾನ್ಸ್‌ಪೋರ್ಟ್ ಸರ್ವಿಸ್ –ವಿರುದ್ಧ–*
*ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಪಿಲೇಟ್ ಟ್ರಿಬ್ಯೂನಲ್,*
*ಎಂ.ಪಿ. ಗ್ವಾಲಿಯಾರ್ ಮತ್ತು ಇತರರು (ಉಲ್ಲೇ) 8*
5. *ಎಐಆರ್ 2007 ಎಸ್‌ಸಿ 989*
*ಎಸ್. ನಜೀರ್ ಅಹ್ಮದ್ –ವಿರುದ್ಧ–*
*ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಇತರರು (ಉಲ್ಲೇ) 9*
6. *ಎಐಆರ್ 2001 ಹಿಮಾಚಲ್ ಪ್ರದೇಶ 1*
*ಶ್ರೀಮತಿ ನಿರ್ಮಲ –ವಿರುದ್ಧ– ಹರಿ ಸಿಂಗ್ (ಉಲ್ಲೇ) 9*
7. *ಎಐಆರ್ 2003 ಎಸ್‌ಸಿ 1886*
*ಕೈಲಾಶ್ ನಾಥ್ ಅಗರವಾಲ್ ಮತ್ತು ಇತರರು*
*–ವಿರುದ್ಧ – ಪ್ರದೀಶಿಯಾ ಇಂಡಸ್ಟ್ರಿಯಲ್ ಅಂಡ್*
*ಇನ್‌ವೆಸ್ಟ್‌ಮೆಂಟ್ ಕರ್ಪೋರೇಷನ್ ಆಫ್ ಯು.ಪಿ.*
*ಮತ್ತು ಇತರರು (ಉಲ್ಲೇ) 17*

ಅರ್ಜಿದಾರರ ಪರ : ಲೆಕ್ಸಾ ನೆಕ್ಸ್‌ಸ್ ಪರವಾಗಿ ಶ್ರೀ ಡಿ.ಆರ್. ರವಿಶಂಕರ್, ವಕೀಲರು; 1, 3 ರಿಂದ 5ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಸ್.ವಿ. ಶಾಸ್ತ್ರಿ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್:**

1. ಈ ಪುನರವಲೋಕನ ಅರ್ಜಿಯನ್ನು ಮೂಲ ದಾವೆ ಸಂ. 144/2012ರಲ್ಲಿ ಪ್ರತ್ಯರ್ಜಿದಾರ ಸಂ.5 ರವರು ಸಲ್ಲಿಸಿರುತ್ತಾರೆ. ದಾವೆಯು ಊರ್ಜಿತವಾಗಿರುವುದಿಲ್ಲವೆಂದು ವಜಾ ಮಾಡಲು ಕೋರಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 2ನೇ ನಿಯಮದ ಕ್ರಮಾದೇಶ II ರೊಂದಿಗೆ ಓದಲಾದ ನಿಯಮ 1ರ XXIII ಕ್ರಮಾದೇಶದಡಿಯಲ್ಲಿ

ಆಕೆ ಸಲ್ಲಿಸಿದ ಮಧ್ಯಂತರ ಅರ್ಜಿ ಸಂ.3ನ್ನು ವಜಾಗೊಳಿಸಿ ಅಧೀನ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಆಕೆ ಪ್ರಶ್ನಿಸಿರುತ್ತಾಳೆ.

2. ದಾವಾ ಅನುಸೂಚಿತ ಸ್ವತ್ತಿನ ಕಾನೂನುಬದ್ಧ ಅಧಿಭೋಗ ಮತ್ತು ಅನುಭೋಗದಲ್ಲಿ ತಾವೇ ನಿರುಪಾಧಿಕ ಮಾಲೀಕರಾಗಿರುತ್ತೇವೆಂದು ಮತ್ತು ಅವರ ಶಾಂತಿಯುತ ಅಧಿಭೋಗ ಮತ್ತು ಅನುಭೋಗದಲ್ಲಿ ಮಧ್ಯೆ ಪ್ರವೇಶಿಸುವುದರಿಂದ ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ಘೋಷಿಸಬೇಕೆಂದು ಕೋರಿ ಮೂಲ ದಾವೆ ಸಂ.144/2012 ದಾವೆಯನ್ನು ಇಲ್ಲಿನ 1 ರಿಂದ 5ರ ವರೆಗಿನ ಪ್ರತ್ಯರ್ಜಿದಾರರು ಸಲ್ಲಿಸಿದ್ದು ಇವುಗಳು ಪುನರವಲೋಕನ ಅರ್ಜಿಯ ಮುಖ್ಯ ವಾಸ್ತವಾಂಶಗಳಾಗಿದ್ದು, ಇದನ್ನು ಇಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗಿರುತ್ತದೆ. ಅಲ್ಲದೆ, ಅವರು 24.07.1996 ಮತ್ತು 01.08.1998ನೇ ದಿನಾಂಕಗಳ ಕ್ರಯ ಪತ್ರಗಳನ್ನು ಮೋಸದಿಂದ ಅನುಕ್ರಮವಾಗಿ ಪ್ರತ್ಯರ್ಜಿದಾರ ಸಂ.2 ಮತ್ತು 5 ರವರುಗಳು ಪಡೆದಿದ್ದು, ಅವರುಗಳಿಗೆ ವಾದಿಗಳು ಬದ್ಧರಾಗಿರುವಂತಿಲ್ಲವೆಂಬ ಘೋಷಣೆಯನ್ನು ಕೋರಿರುತ್ತಾರೆ.

3. ವಾದಿಗಳು, ಕುಟುಂಬದ ಸ್ವತ್ತುಗಳಲ್ಲಿ ತಮ್ಮ ಪಾಲಿನ ಭಾಗ ಮತ್ತು ಪ್ರತ್ಯೇಕ ಅಧಿಭೋಗವನ್ನು ಕೋರಿ ಮೂಲದಾವೆ ಸಂ.237/2007ರಲ್ಲಿ ದಾವೆಯನ್ನು ಈ ಮೊದಲು ಸಲ್ಲಿಸಿರುತ್ತಾರೆ. ಸದರಿ ದಾವೆಯನ್ನು, ಸರಿಯಾಗಿ ರೂಪಿಸಿಲ್ಲವೆಂದು ಹೇಳಿ ಹಿಂದಕ್ಕೆ ಪಡೆದಿರುತ್ತಾರೆ. ಆದಾಗ್ಯೂ, ಹೊಸ ದಾವೆಯನ್ನು ಸಲ್ಲಿಸಲು ಯಾವುದೇ ಸ್ವಾತಂತ್ರ್ಯವನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ, ದಾವೆಯನ್ನು ಹಿಂದಕ್ಕೆ ಪಡೆಯಲು ಹೊಸ ದಾವೆಯನ್ನು ಸಲ್ಲಿಸಲು ಅನುಮತಿಯನ್ನು ಪಡೆಯದೆ ಪ್ರತ್ಯರ್ಜಿದಾರ ಸಂ.5, ವಸ್ತು ವಿಷಯದ ಅಥವಾ ಕ್ಲೇಮಿನ ಭಾಗದ ಸಂಬಂಧದಲ್ಲಿ ಹೊಸ ದಾವೆಯನ್ನು ಹೂಡುವುದರಿಂದ ವಾದಿಗಳನ್ನು ಪ್ರತಿವಾರಿಸಿರುತ್ತಾರೆಂದು, ಹಾಗಾಗಿ, ದಾವೆಯ ಸಿವಿಲ್ ಪ್ರಕ್ರಿಯಾ ಸಂಹಿತೆಯ 1ನೇ ನಿಯಮದ XXIII ಕ್ರಮಾದೇಶದಡಿಯಲ್ಲಿ ಇದನ್ನು ನಿಷೇಧಿಸಿರುವುದರಿಂದ ದಾವೆಯು

ಊರ್ಜಿತವಾಗಿರುವುದಿಲ್ಲವೆಂದು ವಾದಿಸಿ, ಮೂಲ ದಾವೆ ಸಂ.144/2012ರನ್ನು ವಜಾ ಮಾಡಲು ಕೋರಿ ಪ್ರಸ್ತುತ ಎರಡನೇ ದಾವಾ ಅರ್ಜಿಯನ್ನು ಸಲ್ಲಿಸಿರುತ್ತಾರೆ.

4. ಇದರೊಂದಿಗೆ, ಪ್ರತ್ಯರ್ಜಿದಾರರು ಕೋರಿರುವ ಉಪಬಂಧಗಳು ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗುವುದಿಲ್ಲ ಮತ್ತು ಹೊಸ ದಾವೆಯನ್ನು ಈ ಎರಡೂ ದಾವೆಗಳಲ್ಲಿ ಕೋರಿರುವ ಪರಿಹಾರ ಮತ್ತು ವಾದಿಸಿರುವ ವ್ಯಾಜ್ಯ ಕಾರಣಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ಪ್ರತಿವಾದಿಸಲಾಗುವುದಿಲ್ಲವೆಂದು ವಾದಿಸಿ, ಈ ಅರ್ಜಿಯನ್ನು ವಿರೋಧಿಸಲಾಗಿರುತ್ತದೆ.

5. ಅಧೀನ ನ್ಯಾಯಾಲಯವು, ಸ್ವತ್ತಿನ ಪರಭಾರೆಗೆ ಸಂಬಂಧಿಸಿದಂತೆ ವಾದಿಗಳು ಮಾಹಿತಿಯನ್ನು ಪಡೆದಾಗ, ಮೂಲ ದಾವೆ ಸಂ.237/2007ರ ಸಂಬಂಧದಲ್ಲಿನ ವ್ಯಾಜ್ಯ ಕಾರಣವನ್ನು 26.2.2007ರಂದು ಉದ್ಭವಿಸಿರುತ್ತದೆಂದು ತೋರಿಸಲಾಗಿರುವುದರಿಂದ, ಪ್ರಸ್ತುತ ದಾವೆಗೆ ಸಂಬಂಧಿಸಿದ ವ್ಯಾಜ್ಯ ಕಾರಣವು ಪ್ರತಿವಾದಿ ಸಂ.1 ಮತ್ತು ಇವರ ಬೆಂಬಲಿಗರು ಮಧ್ಯೆ ಪ್ರವೇಶಿಸಿದಾಗ 10.01.2012ರಂದು ಉದ್ಭವಿಸಿರುತ್ತದೆಂದು ವಾದದ ಪರಿಶೀಲನೆಯು ಬಹಿರಂಗಪಡಿಸಿರುತ್ತದೆಂದು ಅಭಿಪ್ರಾಯಪಟ್ಟು ಅರ್ಜಿಯನ್ನು ವಜಾಗೊಳಿಸಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು ಎರಡೂ ದಾವೆಗಳಲ್ಲಿನ ವಾದಿಗಳು ಕೋರಿರುವ ಪರಿಹಾರವು ಬೇರೆ ಬೇರೆಯಾಗಿದ್ದು, ಅದರಿಂದಾಗಿ, ಬೇರೆ ವ್ಯಾಜ್ಯ ಕಾರಣದ ಆಧಾರದ ಮೇಲೆ ಮತ್ತೊಂದು ದಾವೆಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ನಿಷೇಧವಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

6. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ರವಿಶಂಕರ್‌ರವರು, ಕ್ರಮಾದೇಶ XXIII ರ 1, 3 ಮತ್ತು 4ನೇ ನಿಯಮಗಳಲ್ಲಿ ಬಳಸಿರುವ ಅಭಿವ್ಯಕ್ತಿಗಳೇ ದಾವೆಯ ವಸ್ತು ವಿಷಯವಾಗಿರುತ್ತದೆ ಮತ್ತು ಸದರಿ ವ್ಯಾಖ್ಯೆಯು ವ್ಯಾಜ್ಯಕಾರಣಕ್ಕೆ ಸಮಾನವೆಂದು ತೋರಿಸಲಾಗುವುದಿಲ್ಲ. ಆದ್ದರಿಂದ, ಹಿಂದೇ ಸಲ್ಲಿಸಿದ ದಾವೆಯನ್ನು ಮತ್ತು ಹೊಸದಾಗಿ ಸಲ್ಲಿಸಿದ ದಾವೆಯ ಒಳಗೊಂಡಿರುವ ವಸ್ತು ವಿಷಯವು

ದೀರ್ಘಕಾಲ ಮಟ್ಟಿಗೆ ಒಂದೇ ತೆರನಾಗಿರುವುದರಿಂದ, ಕ್ರಮಾದೇಶ XXIII ನಿಯಮ 4 ರ ನಿಷೇಧವನ್ನು ಕಾರ್ಯರೂಪಕ್ಕೆ ತರಬೇಕಾಗಿರುತ್ತದೆ ಮತ್ತು ಇಂಥ ಸಂದರ್ಭದಲ್ಲಿ, ಹೊಸ ದಾವೆಯನ್ನು ಸಲ್ಲಿಸಲು ಸ್ವಾತಂತ್ರ್ಯವನ್ನು ಕಾದಿರಿಸುವ ಆದೇಶವು ಇಲ್ಲದಿರುವಲ್ಲಿ, ಕ್ಲೇಮಿನ ವಸ್ತು ವಿಷಯ ಅಥವಾ ಅದರ ಅಂಥ ಭಾಗದ ಸಂಬಂಧದಲ್ಲಿ ಹೊಸ ದಾವೆಯನ್ನು ಹೂಡುವುದರಿಂದ ವಾದಿಯನ್ನು ಪ್ರತಿವಾದಿಸಬೇಕೆಂದು ತಮ್ಮ ನಿವೇದನೆಯನ್ನು ನಿವೇದಿಸಿಕೊಂಡಿರುತ್ತಾರೆ.

7. ಸಂಸತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ XXIIIನೇ ಕ್ರಮಾದೇಶದಲ್ಲಿ, ಅಂಥ ವಸ್ತು–ವಿಷಯ ಅಥವಾ ಅಂಥ ಕ್ಲೇಮಿನ ಭಾಗ ಅಭಿವ್ಯಕ್ತಿಯನ್ನು ಸಲಹಾತ್ಮಕವಾಗಿ ಮತ್ತು ನಿರಂತರವಾಗಿ ಬಳಸಿದ್ದು, ಸಿವಿಲ್ ಪ್ರಕ್ರಿಯಾ ಸಂಹಿತೆಯ 9ನೇ ನಿಯಮದ II ಕ್ರಮಾದೇಶ ಮತ್ತು XXII ಕ್ರಮಾದೇಶದಂಥ ಇತರೆ ಉಪಬಂಧಗಳಲ್ಲಿ, ಕಂಡು ಬಂದಂತೆ, ಒಂದೇ ವ್ಯಾಜ್ಯ ಕಾರಣದ ಅಭಿವ್ಯಕ್ತಿಯನ್ನು ಬಳಸಿರುವುದಿಲ್ಲವೆಂಬುದು ಅವರ ವಾದವಾಗಿರುತ್ತದೆ. 2 ಮತ್ತು 3ನೇ ನಿಯಮಗಳ IIನೇ ಕ್ರಮಾದೇಶದ ಪ್ರಕಾರ ಕೂಡ, ಪ್ರತಿಯೊಂದು ದಾವೆಯು, ವ್ಯಾಜ್ಯ ಕಾರಣದ ಸಂಬಂಧದಲ್ಲಿ, ಅದನ್ನು ರೂಪಿಸುವುದಕ್ಕೆ ಹಕ್ಕುಳ್ಳವರಾಗಿದ್ದ ವಾದಿಗಳು, ಇಡೀ ಕ್ಲೇಮನ್ನು ಒಳಗೊಳ್ಳತಕ್ಕದ್ದು ಮತ್ತು ಆತನ ಕ್ಲೇಮಿನ ಯಾವುದೇ ಭಾಗದ ಸಂಬಂಧದಲ್ಲಿ ದಾವೆಯನ್ನು ಹೂಡುವುದನ್ನು ನಿರಸಿತಗೊಳಿಸಿದಲ್ಲಿ, ಆತ ಹಾಗೆ ನಿರಸಿತಗೊಳಿಸಿದ ಸಂಬಂಧದಲ್ಲಿ ತರುವಾಯ ದಾವೆಯನ್ನು ಹೂಡತಕ್ಕದ್ದು. ***ಆಲ್ಬರ್ಟ್ ಜುಧಾ ಜುಧಾ –ವಿರುದ್ಧ– ರಾಂಪದ ಗುಪ್ತ ಮತ್ತು ಮತ್ತೊಬ್ಬರು*** [1], ಪ್ರಕರಣದಲ್ಲಿ ಕಲ್ಕತ್ತಾ ಉಚ್ಚ ನ್ಯಾಯಾಲಯದ ತೀರ್ಪು ಸರಿಯಾದ ಕಾನೂನನ್ನು ವಿಧಿಸಿರುವುದಿಲ್ಲವೆಂದು ವಾದಿಸಲಾಗಿರುತ್ತದೆ. ಮೊದಲಿನ ದಾವೆಯನ್ನು ಹಿಂದಕ್ಕೆ ಪಡೆದುಕೊಳ್ಳುವುದರ ಮೂಲಕ ಹೊಸ ದಾವೆಯನ್ನು ದಾಖಲಿಸಲು ಅನುಮತಿ ನೀಡುವಾಗಲೂ ಸಹ, ವಿವೇಚನೆಯನ್ನು, ದಾವೆಯ ವಸ್ತು–ವಿಷಯ ಅಥವಾ ಕ್ಲೇಮಿನ ಭಾಗಕ್ಕೆ ಸಂಬಂಧಿಸಿದಂತೆ ಹೊಸ ದಾವೆಯನ್ನು ಆರಂಭಿಸಲು ವಾದಿಗೆ ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ ಕೆಲವು ಔಪಚಾರಿಕ ತೊಂದರೆಗಳು

1. ಎಐಆರ್ 1959 ಕಲ್ಕತ್ತಾ 715 (ಸಂಪುಟ 46, (ಸಿ.200)(1)

ಅಥವಾ ಅಲ್ಲಿ ಕೆಲವು ಯುಕ್ತ ಕಾರಣಗಳಿವೆಯೆಂದು ಮನವರಿಕೆಯಾದ ತರುವಾಯ XXIII ಕ್ರಮಾದೇಶದ 1 ನೇ ನಿಯಮದ (3)ಉಪ ನಿಯಮಕ್ಕನುಸಾರವಾಗಿ ಎಚ್ಚರಿಕೆ ಮತ್ತು ಸೂಕ್ಷ್ಮ ವಿವೇಚನೆಯೊಂದಿಗೆ ನ್ಯಾಯಾಲಯವು ವ್ಯವಹರಿಸಬೇಕೆಂಬ ವಿವೇಚನೆಯು ಪ್ರದತ್ತವಾಗುತ್ತದೆಂದು ವಾದಿಸುವುದಕ್ಕೆ ***ಕೆಎಸ್. ಭೂಪತಿ ಮತ್ತು ಇತರರು –ವಿರುದ್ಧ– ಕೋಕಿಲ ಮತ್ತು ಇತರರು*** [2], ಪ್ರಕರಣದಲ್ಲಿ ತೀರ್ಪನ್ನು ಉದಾಹರಿಸಿರುತ್ತಾರೆ. ಹೊಸ ದಾವೆಯನ್ನು ಸಲ್ಲಿಸುವ ಅನುಮತಿಯೊಂದಿಗೆ ದಾವೆಯನ್ನು ಹಿಂದೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಅನುಮತಿಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಸರಿಯಾದ ಆಧಾರಗಳು ದೊರೆತಿವೆಯೆಂದು ಮನವರಿಕೆ ಮಾಡಿಕೊಳ್ಳುವುದು ಇದರ ಕರ್ತವ್ಯವೆಂದು ಅವರು ವಾದಿಸಿರುತ್ತಾರೆ.

8. ಅದೇ ರೀತಿ, ***ಭಕ್ತವರ ಸಿಂಗ್ ಮತ್ತು ಮತ್ತೊಬ್ಬರು –ವಿರುದ್ಧ – ಸಾದಾ ಕೌರ್ ಮತ್ತು ಮತ್ತೊಬ್ಬರು*** [3], ಪ್ರಕರಣದಲ್ಲಿನ ತೀರ್ಪನ್ನೂ ಸಹ ಉದಾಹರಿಸಲಾಗಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ XXIIIನೇ ಕ್ರಮಾದೇಶದ 1ನೇ ನಿಯಮಕ್ಕೆ ಒತ್ತು ನೀಡಿರುವುದು ಏಕೆಂದರೆ, ವಾದಿಯು, ನ್ಯಾಯಾಲಯದಲ್ಲಿ ಒಮ್ಮೆ ದಾವೆಯನ್ನು ಆರಂಭಿಸಿದಾಗ, ಆ ಮೂಲಕ ಕಾನೂನಿನಡಿಯಲ್ಲಿ ಆತನಿಗೆ ಪರಿಹಾರವು ದೊರೆತಿರುವಾಗ, ಈ ಮೊದಲು ದಾವೆಯನ್ನು ಬಿಟ್ಟುಕೊಟ್ಟ ತರುವಾಯ ಅಥವಾ ನ್ಯಾಯಾಲಯದ ಅನುಮತಿ ಇಲ್ಲದೆ ಹಿಂದಕ್ಕೆ ಪಡೆದಿರುವಾಗ ಮತ್ತೆ ಒಂದೇ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಹೊಸ ದಾವೆಯನ್ನು ಹೂಡಲು ಆತನಿಗೆ ಅನುಮತಿ ನೀಡಲಾಗುವುದಿಲ್ಲವೆಂದು ಮತ್ತು ಯಾವುದೇ ಒಳ್ಳೆಯ ಕಾರಣವಿಲ್ಲದೆ ಒಂದೇ ವ್ಯಾಜ್ಯ ಕಾರಣದ ಮೇಲೆ ಮತ್ತೆ ಮತ್ತೆ ದಾವೆಗಳನ್ನು ಆರಂಭಿಸಿ, ನ್ಯಾಯಾಲಯದ ಕಾರ್ಯ ವಿಧಾನವನ್ನು ದುರುಪಯೋಗ ಪಡಿಸಿಕೊಳ್ಳುವುದರಿಂದ ವ್ಯಾಜ್ಯಕಾರನನ್ನು ರಕ್ಷಿಸುವ ದೃಷ್ಟಿಯಿಂದ ಅಂಥ ಉಪಬಂಧವನ್ನು ಕಲ್ಪಿಸಲಾಗಿರುತ್ತದೆಂದೂ ಹೇಳಲಾಗಿರುತ್ತದೆ. ಹಾಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ XXIIIನೇ ಕ್ರಮಾದೇಶದ 1ನೇ ನಿಯಮದ 3ನೇ ಉಪ–ನಿಯಮದಲ್ಲಿ ನಮೂದಿಸಿರುವ ಎರಡೂ ಆಧಾರಗಳನ್ನು ಸುಸ್ಥಾಪಿಸುವ ಮೂಲಕ

2. (2000) 5 ಎಸ್‌ಸಿಸಿ 458

3. (1996) 11 ಎಸ್‌ಸಿಸಿ 167

ಒಂದು ಹೊಸ ದಾವೆಗೆ ನ್ಯಾಯಾಲಯದ ಅನುಮತಿಯನ್ನು ಆತ ಪಡೆಯಬೇಕೆಂದು ಸಂಹಿತೆಯು ಒತ್ತಿ ಹೇಳುತ್ತದೆಂದು ವಾದಿಸಿರುತ್ತಾನೆ. ಈ ಸಂಬಂಧದಲ್ಲಿ, ***ಸರ್ಗುಜಾ ಟ್ರಾನ್ಸ್‌ಪೋರ್ಟ್ ಸರ್ವಿಸ್ –ವಿರುದ್ಧ – ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಪಿಲೇಟ್ ಟ್ರಿಬ್ಯೂನಲ್, ಎಂ.ಪಿ. ಗ್ವಾಲಿಯಾರ್ ಮತ್ತು ಇತರರು***[4]. ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ಆತ ತನ್ನ ವಾದಕ್ಕೆ ಉದಾಹರಣೆಯನ್ನು ಕೋರಿರುತ್ತಾನೆ.

9. ಶ್ರೀ ಎಸ್.ವಿ. ಶಾಸ್ತ್ರಿ, ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು, ಪ್ರಶ್ನಿತ ಆದೇಶವನ್ನು ಆಧಾರ ಸಹಿತವಾಗಿ ಬೆಂಬಲಿಸಿರುತ್ತಾರೆ. ಇವರು ***ಎಸ್. ನಜೀರ್ ಅಹ್ಮದ್–ವಿರುದ್ಧ– ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಇತರರು*** [5] ಮತ್ತು ***ಶ್ರೀಮತಿ ನಿರ್ಮಲ –ವಿರುದ್ಧ– ಹರಿಸಿಂಗ್*** [6], ಪ್ರಕರಣಗಳಲ್ಲಿನ ತೀರ್ಪನ್ನು ಉದಾಹರಿಸಿರುತ್ತಾರೆ.

10. ಇಬ್ಬರೂ ಪಕ್ಷಕಾರರ ಮಾನ್ಯ ನ್ಯಾಯವಾದಿಗಳು ವಾದಿಸಿದ ವಾದಗಳನ್ನು ಆಲಿಸಿದ ಮೇಲೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ (3)ನೇ ಉಪ–ಖಂಡದಲ್ಲಿ ಬಳಸಿರುವ 'ದಾವೆಯ ವಸ್ತು ವಿಷಯ' ಅಥವಾ 'ಕ್ಲೇಮಿನ ಭಾಗ' ಮತ್ತು ಕ್ರಮಾದೇಶ XXIIIರ 1ನೇ ಉಪ ನಿಯಮದ (4)ನೇ ಉಪ–ಖಂಡದಲ್ಲಿ ಬಳಸಿರುವ 'ಅಂಥ ವಸ್ತು ವಿಷಯ' ಅಥವಾ 'ಅಂಥ ಕ್ಲೇಮಿನ ಭಾಗ' ಎಂಬ ಪರಿಭಾಷೆಗಳನ್ನು ವಿವರಿಸಿಕೊಳ್ಳುವ ಮತ್ತು ಅರ್ಥೈಸಿಕೊಳ್ಳುವ ವಿಚಾರದ ಸುತ್ತಲೇ ವಿವಾದವು ಗಸ್ತು ಹೊಡೆಯುತ್ತಿರುವುದು ಸ್ಪಷ್ಟವಾಗಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ನಿಯಮದ XXIIIರ ಆದೇಶದಲ್ಲಿ ಒಳಗೊಂಡ ಉಪಬಂಧಗಳಿಗೆ ಇದನ್ನು ಉಲ್ಲೇಖಿಸುವುದು ಅವಶ್ಯಕವಾಗಿರುತ್ತದೆ.

**ದಾವೆಯನ್ನು ಹಿಂತೆಗೆದುಕೊಳ್ಳುವುದು ಮತ್ತು ಹೊಂದಾಣಿಕೆ ಮಾಡುವುದು**

4. (1987) 1 ಎಸ್‌ಸಿಸಿ 5

5. (ಎಐಆರ್ 2007 ಎಸ್‌ಸಿ 989)

6. ಎಐಆರ್ 2001 ಹಿಮಾಚಲ್ ಪ್ರದೇಶ 1

[1. **ದಾವೆಯನ್ನು ಹಿಂತೆಗೆದುಕೊಳ್ಳುವುದು ಅಥವಾ ಕ್ಲೇಮಿನ ಒಂದು ಭಾಗವನ್ನು ಬಿಟ್ಟುಕೊಡುವುದು**. (1) ದಾವೆಯನ್ನು ಹೂಡಿದ ಅನಂತರದ ಯಾವುದೇ ಕಾಲದಲ್ಲಿ, ಪ್ರತಿವಾದಿಗಳಲ್ಲಿ ಎಲ್ಲರ ವಿರುದ್ಧವಾಗಿ ಅಥವಾ ಯಾರ ವಿರುದ್ಧವಾಗಿಯಾದರೂ ವಾದಿಯು ತನ್ನ ದಾವೆಯನ್ನು ಬಿಟ್ಟುಕೊಡಬಹುದು ಅಥವಾ ತನ್ನ ಕ್ಲೇಮಿನ ಒಂದು ಭಾಗವನ್ನು ಬಿಟ್ಟು ಕೊಡಬಹುದು:

ಪರಂತು, ವಾದಿಯು ಅಪ್ರಾಪ್ತ ವಯಸ್ಕನಾಗಿರುವಲ್ಲಿ ಅಥವಾ XXXIIನೇ ಕ್ರಮಾದೇಶದ 1 ರಿಂದ 14ರ ವರೆಗಿನ ನಿಯಮಗಳಲ್ಲಿ ಅಡಕವಾಗಿರುವ ಉಪಬಂಧಗಳು ಅನ್ವಯಿಸುವ ಇತರ ವ್ಯಕ್ತಿಯಾಗಿರುವಲ್ಲಿ, ದಾವೆಯನ್ನಾಗಲಿ ಅಥವಾ ಕ್ಲೇಮಿನ ಯಾವುದೇ ಭಾಗವನ್ನಾಗಲೀ ನ್ಯಾಯಾಲಯದ ಅನುಮತಿಯಿಲ್ಲದೆ ಬಿಟ್ಟುಕೊಡತಕ್ಕದ್ದಲ್ಲ.

(2) (1)ನೇ ಉಪ ನಿಯಮದ ಪರಂತುಕದ ಮೇರೆಗಿನ ಅನುಮತಿಗಾಗಿ ಸಲ್ಲಿಸಲಾದ ಅರ್ಜಿಯ ಜೊತೆಯಲ್ಲಿ ವಾದ ಮಿತ್ರನ ಶಪಥಪತ್ರವು ಮತ್ತು ಅಪ್ರಾಪ್ತ ವಯಸ್ಕನು ಅಥವಾ ಅಂಥ ಇತರ ವ್ಯಕ್ತಿಯು ಪ್ಲೀಡರನಿಂದ ಪ್ರತಿನಿಧಿತನಾಗಿದ್ದರೆ, ಪ್ರಸ್ತಾಪಿತವಾಗಿರುವ ಬಿಟ್ಟುಕೊಡುವಿಕೆಯು ಅಪ್ರಾಪ್ತ ವಯಸ್ಕನಿಗೆ ಅಥವಾ ಅಂಥ ಇತರ ವ್ಯಕ್ತಿಗೆ ತನ್ನ ಅಭಿಪ್ರಾಯದಲ್ಲಿ ಪ್ರಯೋಜನಕಾರಿಯಾಗಿದೆ ಎಂಬ ಬಗ್ಗೆ ಆ ಪ್ಲೀಡರನ ಪ್ರಮಾಣಪತ್ರವು ಸಹ ಇರತಕ್ಕದ್ದು.

(3) (ಎ) ಯಾವುದಾದರೂ ವಿಧ್ಯುಕ್ತ ನ್ಯೂನತೆಯ ಕಾರಣದಿಂದಾಗಿ ದಾವೆಯು ವಿಫಲವಾಗತಕ್ಕದ್ದು ಎಂದು, ಅಥವಾ

(ಬಿ) ದಾವೆಯ ವಸ್ತು ವಿಷಯದ ಬಗ್ಗೆ ಅಥವಾ ಕ್ಲೇಮಿನ ಭಾಗದ ಬಗ್ಗೆ ಹೊಸ ದಾವೆಯನ್ನು ಹೂಡಲು ವಾದಿಗೆ ಅವಕಾಶ ಕೊಡುವುದಕ್ಕಾಗಿ ಸಾಕಷ್ಟು ಆಧಾರಗಳಿವೆ ಎಂದು,

–ನ್ಯಾಯಾಲಯಕ್ಕೆ ಮನದಟ್ಟಾದಲ್ಲಿ, ಅದು, ತಾನು ಸೂಕ್ತವೆಂದು ಆಲೋಚಿಸಿದಂಥ ನಿಬಂಧನೆಗಳ ಮೇಲೆ, ಅಂಥ ದಾವೆಯ ಅದೇ ವಸ್ತು ವಿಷಯದ ಅಥವಾ ಕ್ಲೇಮಿನ ಅಂಥ ಭಾಗದ ಸಂಬಂಧದಲ್ಲಿ ಹೊಸ ದಾವೆಯನ್ನು ಹೂಡುವ ಸ್ವಾತಂತ್ರ್ಯವನ್ನು ವಾದಿಗೆ ಕೊಟ್ಟು ಅಂಥ ದಾವೆಯನ್ನು ಅಥವಾ ಕ್ಲೇಮಿನ ಭಾಗವನ್ನು ಹಿಂತೆಗೆದುಕೊಳ್ಳಲು ಅವನಿಗೆ ಅನುಮತಿಯನ್ನು ಕೊಡಬಹುದು.

(4) ವಾದಿಯು, –

(ಎ) (1)ನೇ ಉಪನಿಯಮದ ಮೇರೆಗೆ ಯಾವುದೇ ದಾವೆಯನ್ನು ಅಥವಾ ಕ್ಲೇಮಿನ ಭಾಗವನ್ನು ಬಿಟ್ಟುಕೊಟ್ಟಲ್ಲಿ, ಅಥವಾ

(ಬಿ) (3)ನೇ ಉಪನಿಯಮದಲ್ಲಿ ಉಲ್ಲೇಖಿಸಲಾಗಿರುವ ಅನುಮತಿ ಇಲ್ಲದೆ ದಾವೆಯನ್ನು ಅಥವಾ ಕ್ಲೇಮಿನ ಭಾಗವನ್ನು ಹಿಂತೆಗೆದುಕೊಂಡಲ್ಲಿ,

–ಅವನು ನ್ಯಾಯಾಲಯವು ವಿಧಿಸಬಹುದಾದಂಥ ಖರ್ಚುಗಳಿಗೆ ಹೊಣೆಗಾರನಾಗಿರತಕ್ಕದ್ದು ಮತ್ತು ಅಂಥ ವಸ್ತು ವಿಷಯದ ಅಥವಾ ಕ್ಲೇಮಿನ ಅಂಥ ಭಾಗದ ಸಂಬಂಧದಲ್ಲಿ ಯಾವುದೇ ಹೊಸ ದಾವೆಯನ್ನು ಹೂಡುವುದರಿಂದ ಪ್ರತಿವಾರಿತನಾಗತಕ್ಕದು.

> (5) ಈ ಉಪ ನಿಯಮದಲ್ಲಿರುವುದು ಯಾವುದೂ ಇತರ ವಾದಿಗಳ ಸಮ್ಮತಿಯಿಲ್ಲದೆ ದಾವೆಯನ್ನು ಅಥವಾ ಕ್ಲೇಮಿನ ಭಾಗವನ್ನು (1)ನೇ ಉಪನಿಯಮದ ಮೇರೆಗೆ ಬಿಟ್ಟುಕೊಡಲು ಅಥವಾ (3)ನೇ ಉಪನಿಯಮದ ಮೇರೆಗೆ ಹಿಂತೆಗೆದುಕೊಳ್ಳಲು ಹಲವು ವಾದಿಗಳಲ್ಲಿ ಒಬ್ಬನಿಗೆ ಅನುಮತಿ ಕೊಡಲು ನ್ಯಾಯಾಲಯವನ್ನು ಅಧಿಕೃತಗೊಳಿಸುತ್ತದೆಂದು ಭಾವಿಸತಕ್ಕದ್ದಲ್ಲ.]

11. ಹಾಗಾಗಿ, ವಾದಿಯು, ದಾವೆಯನ್ನು ಆರಂಭಿಸಿದ ತರುವಾಯ, ಎಲ್ಲಾ ಪ್ರತಿವಾದಿಗಳ ಅಥವಾ ಯಾರೇ ಪ್ರತಿವಾದಿಯ ಸಂಬಂಧದಲ್ಲಿನ ಕ್ಲೇಮನ್ನು ಅಥವಾ ಅದರ ಭಾಗವನ್ನು ಪರಿತ್ಯಜಿಸಿ, 'ಅಂಥ ದಾವೆಯ ವಸ್ತು ವಿಷಯ' ಅಥವಾ 'ಕ್ಲೇಮಿನ ಅಂಥ ಭಾಗ'ದ ಸಂಬಂಧದಲ್ಲಿ ಹೊಸ ದಾವೆಯನ್ನು ಆರಂಭಿಸಲು ಆತ ಬಯಸಿದಲ್ಲಿ, ಆತನನ್ನು ನ್ಯಾಯಾಲಯದ ಅನುಮತಿಯನ್ನು ಪಡೆಯಲು ಅಗತ್ಯಪಡಿಸಲಾಗಿರುತ್ತದೆ. 'ದಾವೆಯ ವಸ್ತು ವಿಷಯ' ಅಥವಾ ಕ್ಲೇಮಿನ ಭಾಗ'ಕ್ಕೆ ಸಂಬಂಧಿಸಿದಂತೆ ಹೊಸ ದಾವೆಯನ್ನು ಆರಂಭಿಸಲು ವಾದಿಗೆ ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ, ದಾವೆಯು ವಿಫಲವಾಗುವಂಥ ಅಥವಾ ಸಮುಚಿತ ಆಧಾರಗಳು ಇರುವಂಥ ಕಾರಣದ ಮೇಲೆ ದಾವೆಯನ್ನು ಕೆಲವು ಔಪಚಾರಿಕ ದೋಷಗಳಿವೆಯೆಂದು ನ್ಯಾಯಾಲಯಕ್ಕೆ ಮನವರಿಕೆಯಾದಲ್ಲಿ ನ್ಯಾಯಾಲಯವು ಅಂಥ ಅನುಮತಿಯನ್ನು ನೀಡುತ್ತದೆ.

12. ಪ್ರಸ್ತುತ ಮೊಕದ್ದಮೆಯಲ್ಲಿ, ಮೊದಲ ದಾವೆ ಒ.ಎಸ್.237/2007ನ್ನು ಅವರ ಪಾಲಿನ ಭಾಗ ಮತ್ತು ಪ್ರತ್ಯೇಕ ಅಧಿಭೋಗವನ್ನು ಕೋರಿ ವಾದಿಗಳು ಸಲ್ಲಿಸಿರುತ್ತಾರೆ. ಇದನ್ನು ಸದರಿ ಪ್ರತ್ಯರ್ಜಿದಾರರ ವಿರುದ್ಧವೇ ಆರಂಭಿಸಲಾಗಿರುತ್ತದೆ. ಸದರಿ ದಾವೆಯನ್ನು, ಹೊಸ ದಾವೆ ಸಲ್ಲಿಸಲು ಯಾವುದೇ ಅನುಮತಿಯನ್ನು ಕೋರದೆ ಹಿಂದಕ್ಕೆ ಪಡೆದಿರುತ್ತಾರೆ. ಎರಡನೇ ದಾವೆ ಒ.ಎಸ್.ಸಂ.144/2012ನ್ನು ಪ್ರತ್ಯೇಕ ಭಾಗಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವುದಿಲ್ಲ. ಆದರೆ, ವಾದಿಗಳು ಸ್ವತ್ತಿನ ನಿರುಪಾದಿಕ ಮಾಲೀಕರೆಂದು ಘೋಷಿಸಬೇಕೆಂದು ಪರಿಹಾರವನ್ನು ಕೋರಿ

ಸಲ್ಲಿಸಿರುತ್ತಾರೆ. ಎರಡೂ ದಾವೆಗಳಲ್ಲಿ, ದಾವಾ ಅನುಸೂಚಿ ಸ್ವತ್ತುಗಳು ಒಂದೇ ಆಗಿರುತ್ತವೆ. ಆದ್ದರಿಂದ, 'ದಾವೆಯ ವಸ್ತು ವಿಷಯ' ಒಂದೇ ಆಗಿದ್ದು, ಈ ಮುಂಚಿನ ದಾವೆಯನ್ನು ಅನುಮತಿ ಕೋರದೆ ಹಿಂದಕ್ಕೆ ಪಡೆದುದರಿಂದ, ಅದು ವಜಾಗೊಂಡಿರುತ್ತದೆ. ಹಾಗಾಗಿ ಎರಡನೇ ದಾವೆಯನ್ನು ನಿಷೇಧಿಸಬೇಕೆಂದು ಕೋರಿರುತ್ತೇವೆ.

13. ಸಿವಿಲ್ ಪ್ರಕ್ರಿಯಾ ಸಂಹಿತೆಯ (3)ನೇ ಉಪ-ಪ್ರಕರಣದಲ್ಲಿ ಬಳಸಿರುವ 'ದಾವೆಯ ವಸ್ತು ವಿಷಯ' ಅಥವಾ 'ಕ್ಲೇಮಿನ ಭಾಗ' ಎಂಬ ಪರಿಭಾಷೆಯನ್ನು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ XXIII ಆದೇಶದ 1ನೇ ನಿಯಮದ (4)ನೇ ಉಪ-ಖಂಡದಲ್ಲಿ ಒತ್ತಿಹೇಳಿರುವ ಪರಿಭಾಷೆಯನ್ನು, ವ್ಯಾಜ್ಯದ ವಸ್ತು ವಿಷಯವಾಗಿರುವಂಥ ಚರಾಸ್ತಿ ಮತ್ತು ಸ್ಥಿರಾಸ್ತಿಗೆ ಕೇವಲ ಉಲ್ಲೇಖಿಸಿದಂತೆ ಅರ್ಥೈಸಿಕೊಳ್ಳಲಾಗುವುದಿಲ್ಲ. ಅಂಥ ನಿರ್ಬಂಧಿತ ವ್ಯಾಖ್ಯಾನವನ್ನು ವಿಧಿಸಿದಲ್ಲಿ, ಒಮ್ಮೆ ಒಂದು ದಾವೆಯನ್ನು, ಒಬ್ಬ ವ್ಯಕ್ತಿಯ ವಿರುದ್ಧ ಒಂದು ನಿರ್ದಿಷ್ಟ ಸ್ವತ್ತಿನ ಸಂಬಂಧದಲ್ಲಿ ಸಲ್ಲಿಸಿದರೆ ಮತ್ತು ಸದರಿ ದಾವೆಯನ್ನು ಅನುಮತಿ ಪಡೆಯದೆ ಪರಿತ್ಯಜಿಸಿದರೆ ಅಥವಾ ಹಿಂದಕ್ಕೆ ಪಡೆದರೆ, ತರುವಾಯ ಸದರಿ ಸ್ವತ್ತಿನ ಸಂಬಂಧದಲ್ಲಿ, ಅವುಗಳಡಿಯಲ್ಲಿ ಕ್ಲೇಮು ಮಾಡಿದ ಸದರಿ ದಾವೆ ಅಥವಾ ವ್ಯಕ್ತಿಗಳಲ್ಲಿನ ಪ್ರತ್ಯರ್ಜಿದಾರರ ವಿರುದ್ಧ ಯಾವುದೇ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಸಂದರ್ಭಗಳಡಿಯಲ್ಲಿ ಯಾವುದೇ ಎರಡನೇ ದಾವೆ ಅಥವಾ ಇತರೆ ದಾವೆಯನ್ನು ಸಲ್ಲಿಸಬಾರದೆಂದು ಹೇಳುವುದು ಅದಕ್ಕೆ ಸರಿಯದುದೇ ಆಗಿರುತ್ತದೆ. ಈ ಉಪಬಂಧವನ್ನು ಅಧಿನಿಯಮಿಸುವಲ್ಲಿ ವಿಧಾನ ಮಂಡಲದ ಮೂಲ ಧ್ಯೇಯ ಮತ್ತು ಉದ್ದೇಶವನ್ನು, ಒಂದೇ ಸ್ವತ್ತಿನ ಸಂಬಂಧದಲ್ಲಿ ಯಾವುದೇ ಇತರೆ ದಾವೆಯ ಎಲ್ಲಾ ರೀತಿಯ ಆರಂಭವನ್ನು ಒಮ್ಮೆಗೆ ನಿಷೇಧಿಸಿರುತ್ತದೆಂಬುದು ಕಂಡು ಬಂದಿರುವುದಿಲ್ಲ. 'ಒಂದೇ ವಸ್ತು ವಿಷಯ' ಅಥವಾ 'ಒಂದೇ ಕ್ಲೇಮು' ಅಥವಾ 'ಕ್ಲೇಮಿನ ಭಾಗದ' ಅಭಿವ್ಯಕ್ತಿಯು 'ಒಂದೇ ಸ್ವತ್ತು' ಎಂಬ ಪರಿಭಾಷೆಗೆ ಸಾದೃಶ್ಯದಂತೆ ಉಪಬಂಧಗಳನ್ನು ಬಳಸಲಾಗಿರುವುದಿಲ್ಲ.

14. ಪ್ರಸ್ತುತ ಪ್ರಕರಣದ ಉದ್ದೇಶಕ್ಕೆ ಸಂಬಂಧಿಸಿದಂತೆ, ವಾಸ್ತವಾಂಶಗಳನ್ನು ನಾವು ಪರಿಶೀಲಿಸಿದಲ್ಲಿ, ಮೊದಲ ದಾವೆಯನ್ನು ಸಹ, ಇದೇ ಸ್ವತ್ತುಗಳ ಸಂಬಂಧದಲ್ಲಿ ಆರಂಭಿಸಲಾಗಿದ್ದು, ಆದರೆ ಪ್ರತ್ಯರ್ಜಿದಾರರೊಂದಿಗೆ ವಾದಿಗಳು ಎಲ್ಲಾ ಸ್ವತ್ತುಗಳ ಮೇಲಿನ ಜಂಟಿ ಕ್ಲೇಮನ್ನು ಒಳಗೊಂಡಿರುವಂಥ ಪಾಲನ್ನು ಕೋರಿರುವ ಸುಸ್ಪಷ್ಟ ಮತ್ತು ಪ್ರತ್ಯೇಕ ಪರಿಹಾರವನ್ನು ಕೋರಿರುವುದು ಸ್ಪಷ್ಟವಾಗುತ್ತದೆ. ವಾದಿಗಳು ಅವರ ಪಾಲಿನ ಭಾಗವನ್ನು ಕೋರಿರುತ್ತಾರೆ. ಎರಡನೇ ದಾವೆಗೆ ಸಂಬಂಧಪಡುವಷ್ಟರ ಮಟ್ಟಿಗೆ ವಾದಿಗಳು, ಪ್ರತ್ಯರ್ಜಿದಾರರೊಂದಿಗೆ ಸ್ವತ್ತಿನಲ್ಲಿನ ಭಾಗವನ್ನು ಕ್ಲೇಮು ಮಾಡದೆ, ಅವರು, ಸ್ವತ್ತುಗಳ ಮೇಲೆ ಅವರ ನಿರುಪಾಧಿಕ ಹಕ್ಕನ್ನು ಒತ್ತಿಹೇಳಿರುತ್ತಾರೆ. ಆದ್ದರಿಂದ, ದಾವೆಯ ವಸ್ತು ವಿಷಯವು, ಮಾಡಲಾದ ಕ್ಲೇಮಿನ ರೀತಿಯಲ್ಲಿ, ಕೋರಲಾದ ಪರಿಹಾರದ ಸ್ವರೂಪ ಮತ್ತು ಸದರಿ ಪರಿಹಾರದ ಅಥವಾ ಹಕ್ಕನ್ನು ಗುರುತು ಮಾಡಿರುವ ಆಧಾರದ ಮೇಲೆ, ಎರಡೂ ದಾವೆಗಳಲ್ಲಿ ರೂಪಿಸಿರುವ ದಾವೆ ಮತ್ತು ಕ್ಲೇಮಿನ ವಸ್ತು ವಿಷಯವು ವಿಭಿನ್ನವಾಗಿರುವುದು ಸುಸ್ಪಷ್ಟವಾಗಿರುತ್ತದೆ. ಆದರೆ, ದಾವೆಯ ವಸ್ತು ವಿಷಯವನ್ನು ಎರಡೂ ದಾವೆಗಳಲ್ಲಿ ಒಳಗೊಂಡಿರುವ ಸ್ವತ್ತಿನ ಉಲ್ಲೇಖಕ್ಕೆ ವಿರುದ್ಧವಾದ ರೀತಿ ರೂಪಿಸಿದಲ್ಲಿ, ತರುವಾಯ ಇದು ಎರಡೂ ದಾವೆಗಳು ಒಂದೇ ವಸ್ತು ವಿಷಯಕ್ಕೆ ಸಂಬಂಧಿಸುತ್ತವೆಂಬ ಅರ್ಥವನ್ನು ಪಡೆಯುತ್ತದೆ.

15. ಕ್ರಮಾದೇಶ XXIIIರ 1ನೇ ನಿಯಮದ (1) ರಿಂದ (3)ರ ವರೆಗಿನ ಉಪ ನಿಯಮಗಳಲ್ಲಿ ಒಳಗೊಂಡ ಉಪಬಂಧಗಳಿಂದ ಕಾಣಬಹುದಾದಂತೆ, ವಿಧಾನ ಮಂಡಲದ ಉದ್ದೇಶವು, ದಾವೆಯನ್ನು ಆರಂಭಿಸಲು ವಾದಿ/ ಕಕ್ಷಿದಾರ ನಿಷೇಧಿಸಿರುವುದಾಗಿದ್ದು, ತರುವಾಯ, ಆತನ ಆಯ್ಕೆಯಲ್ಲಿ ಇದನ್ನು ಪರಿತ್ಯಜಿಸಿ, ಒಂದೇ ರೀತಿಯ ಕ್ಲೇಮು ಅಥವಾ ಪರಿಹಾರವನ್ನು ಕೋರಿ ಮತ್ತೊಂದು ದಾವೆಯನ್ನು ಹೂಡಿರುತ್ತದೆ. ಇದು ದಾವೆಗಳ ಅಂಥ ಆರಂಭಕ್ಕೆ ಅನುಮತಿ ನೀಡುವ ಸಾರ್ವಜನಿಕ ಕಾರ್ಯನೀತಿಗೆ ವಿರುದ್ಧವಾಗಿದೆ. ಆದರೆ, ಒಂದು ನಿರ್ದಿಷ್ಟ ಸ್ವತ್ತಿನ ಸಂಬಂಧದಲ್ಲಿ ಒಂದು ದಾವೆಯನ್ನು ಆರಂಭಿಸಿದಾಗ, ತರುವಾಯ, ಈ ಮೊದಲು ದಾವೆಯನ್ನು ಹಿಂದಕ್ಕೆ ಪಡೆಯಲು ನ್ಯಾಯಲಯದಿಂದ ವಾದಿಯು ಅನುಮತಿಯನ್ನು ಪಡೆಯದ

ಹೊರತು, ಸದರಿ ಸ್ವತ್ತಿನ ಸಂಬಂಧದಲ್ಲಿ ಎರಡನೇ ದಾವೆಯನ್ನು ಹೂಡುವಂತಿರುವುದಿಲ್ಲವೆಂಬುದು, ಈ ಉಪಬಂಧದ ಹಿಂದಿರುವ ಉದ್ದೇಶ ಮತ್ತು ತಾತ್ಪರ್ಯದ ಇಂಗಿತಾರ್ಥವಾಗಿರುತ್ತದೆಂಬುದನ್ನು ಹೇಳಬೇಕಾಗುತ್ತದೆ. ವಾದಿಗಳು ಮೊದಲ ದಾವೆಯನ್ನು ಪರಿತ್ಯಜಿಸುವ ಸಮಯದಲ್ಲಿ ಕೂಡ, ಒಂದೇ ಸ್ವತ್ತಿನ ಸಂಬಂಧದಲ್ಲಿ, ಒಬ್ಬನೇ ವ್ಯಕ್ತಿಯ ವಿರುದ್ಧ, ಬೇರೆ ಬೇರೆ ವ್ಯಾಜ್ಯ ಕಾರಣಗಳ ಮೇಲೆ ಆಧರಿಸಿದ ಸಂಪೂರ್ಣ ಭಿನ್ನವಾದ ಪರಿಹಾರವನ್ನು ಕೋರಿ ಎರಡನೇ ದಾವೆಯನ್ನು ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಅವರ ಇಚ್ಛೆಯನ್ನು ರೂಪಿಸಿಕೊಳ್ಳಬಹುದೆಂಬ ಹಕ್ಕಿನ ಬಗ್ಗೆಯೂ ಕೂಡ ಅವರಿಗೆ ತಿಳುವಳಿಕೆ ಇರದೇ ಇರಬಹುದಾಗಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ XXIIIನೇ ಆದೇಶದ, 1ನೇ ನಿಯಮದ (3) ಮತ್ತು (4)ನೇ ಉಪ ನಿಯಮಗಳಲ್ಲಿ ಬಳಸಿರುವ 'ದಾವೆಯ ವಸ್ತು ವಿಷಯ' ಪರಿಭಾಷೆಗೆ ಕಿರಿದಾದ ಅರ್ಥವ್ಯಾಪ್ತಿಯನ್ನು ನೀಡುವ ಮೂಲಕ ಅಂಥ ಎರಡನೇ ದಾವೆಯನ್ನು ಪ್ರತಿವಾರಿಸಿರುವುದು ದಾವೆಯನ್ನು ಆರಂಭಿಸುವುದರಿಂದ ಒಂದೇ ಪಕ್ಷಕಾರರ ವಿರುದ್ಧ ಒಂದೇ ಸ್ವತ್ತಿನ ಸಂಬಂಧದಲ್ಲಿ ಹೊಸ ಮತ್ತು ವಿಭಿನ್ನವಾದ ಕ್ಲೇಮು ಅಥವಾ ವ್ಯಾಜ್ಯಕಾರಣವನ್ನು ಪಡೆಯಬಹುದಾದಂಥ ಪ್ರಾಮಾಣಿಕ ಕಕ್ಷಿದಾರನ ಅವಕಾಶವನ್ನು ತಪ್ಪಿಸಲು ಕಾರಣವಾಗುತ್ತದೆ.

16. 'ದಾವೆಯ ವಸ್ತು ವಿಷಯ'ದ ಅರ್ಥ ವ್ಯಾಪ್ತಿಯನ್ನು, ಮೇಲೆ ಹೇಳಿದುದರ ಹಿನ್ನೆಲೆಯಲ್ಲಿ ಅರ್ಥೈಸಿಕೊಂಡಲ್ಲಿ, ಅದು ಸಲ್ಲಿಸಿದ ಇಡೀ ವಾದದಿಂದ ಖಚಿತಪಡಿಸಿಕೊಳ್ಳಬಹುದಾದಂಥ ವಸ್ತು ವಿಷಯವಾಗಿರುತ್ತದೆ. ವಾದಪತ್ರವು, ಕ್ಲೇಮು ಮಾಡಿದ ಪರಿಹಾರ, ವ್ಯಾಜ್ಯ ಕಾರಣ ಮತ್ತು ಅಂಥ ಪರಿಹಾರಕ್ಕೆ ಸಂಬಂಧಿಸಿದಂತೆ ವಾದಿಯು ಹಕ್ಕುಳ್ಳವನಾಗಿರುತ್ತಾನೆಂಬ ಆತನ ಹಕ್ಕಿನ ಆಧಾರಗಳನ್ನು ನಿರೂಪಿಸುತ್ತದೆ. ಆದ್ದರಿಂದ, ಕ್ಲೇಮು ಮಾಡಿದ ಪರಿಹಾರ, ಮತ್ತು ಎರಡನೇ ದಾವೆಯಲ್ಲಿ ವಾದ ಮಾಡಲಾದಂತೆ ಕ್ಲೇಮು ಮಾಡಿದ ಪರಿಹಾರಕ್ಕೆ ಪೂರಕವಾದ ವ್ಯಾಜ್ಯ ಕಾರಣಗಳು, ಈ ಹಿಂದೆ ಆರಂಭಿಸಿದ ದಾವೆಯಲ್ಲಿ ವಾದ ಮಾಡಿದುದರಿಂದ ವಿಭಿನ್ನವಾಗಿದ್ದು ಆದರೆ, ಅನುಮತಿ ಪಡೆಯದೆ ಹಿಂದಕ್ಕೆ ಪಡೆದಿದ್ದಲ್ಲಿ ತರುವಾಯ, ಸಿವಿಲ್

ಪ್ರಕ್ರಿಯಾ ಸಂಹಿತೆಯ XXIIIನೇ ಕ್ರಮಾದೇಶದ 1ನೇ ನಿಯಮದ (3) ಮತ್ತು (4)ನೇ ಉಪ ನಿಯಮಗಳ ಉದ್ದೇಶಗಳಿಗೆ ಸಂಬಂಧಿಸಿದಂತೆ ಎರಡೂ ದಾವೆಗಳು, ಒಂದೇ ವಸ್ತು ವಿಷಯಕ್ಕೆ ಸಂಬಂಧಿಸಿರುವುದಿಲ್ಲವೆಂದು ಅಭಿಪ್ರಾಯ ಪಡಬೇಕಾಗಿರುತ್ತದೆ. ಹಾಗಾಗಿ, ವಸ್ತು ವಿಷಯವನ್ನು ವಿಭಿನ್ನವಾಗಿಸಿರುವಂಥವುಗಳು, ತರುವಾಯದ ದಾವೆಯನ್ನು ಸಲ್ಲಿಸುವಂತೆ ವಾದಿಗಳು ರೂಪಿಸಿರುವಂಥ ವಸ್ತುನಿಷ್ಠ ವಾಸ್ತವಾಂಶಗಳಿಗೆ ಹೊಸ ವಾಸ್ತವಾಂಶಗಳ ಮಧ್ಯೆ ನುಸುಳಬಹುದಾದ ಅಥವಾ ಸೇರ್ಪಡೆ ಮಾಡಿಕೊಳ್ಳಬಹುದಾದ ಹೊಸ ವಾಸ್ತವಾಂಶಗಳಾಗಿರಬಹುದಾಗಿರುತ್ತದೆ. ವಾಸ್ತವಾಂಶಗಳಲ್ಲಿ ಯಾವುದೇ ಬದಲಾವಣೆ ಇಲ್ಲದಿದ್ದಲ್ಲಿ ಮತ್ತು ಪ್ರಸ್ತುತ ಇರುವ ವಾಸ್ತವಾಂಶಗಳೂ ಎರಡನೇ ದಾವೆಯನ್ನು ಆರಂಭಿಸಿದಾಗ ಸಾದೃಶ್ಯವಾಗಿದ್ದಲ್ಲಿ ಅಥವಾ ಒಂದೇ ರೀತಿ ಇದ್ದಲ್ಲಿ, ಮತ್ತು ಅಲ್ಲಿ ಬೇರೆ ಬೇರೆ ವ್ಯಾಜ್ಯಕಾರಣ ಇಲ್ಲದಿದ್ದಲ್ಲಿ, ತರುವಾಯ, ಹಿಂದಿನ ದಾವೆಯಲ್ಲಿ ಕೋರಿದಂಥ ಪರಿಹಾರಕ್ಕಿಂತ ಭಿನ್ನವಾದ ಪರಿಹಾರವನ್ನು ಭಿನ್ನವಾದ ಭಾಷೆಯಲ್ಲಿ ಕೋರಿರುವುದರಿಂದ, ಎರಡನೇ ದಾವೆಯನ್ನು ಊರ್ಜಿತಗೊಳಿಸಲಾಗುವುದಿಲ್ಲ. ಹೊಸ ವ್ಯಾಜ್ಯ ಕಾರಣವು ಒದಗಿ ಬಂದಿರುವುದನ್ನು ಆಧರಿಸಿ ಹೊಸದಾಗಿ ಮಧ್ಯೆ ಬರುವ ವಾಸ್ತವಾಂಶಗಳು ಅಸ್ತಿತ್ವಕ್ಕೆ ಬಂದಲ್ಲಿ ಅಥವಾ ಹೆಚ್ಚುವರಿ ವಾಸ್ತವಾಂಶಗಳು ಮಧ್ಯೆ ಬಂದಲ್ಲಿ ತರುವಾಯ, ಮೊದಲ ದಾವೆಯು, ಇದೇ ಸ್ವತ್ತಿನ ಸಂಬಂಧದಲ್ಲಿ, ಅನುಮತಿ ಪಡೆಯದೆ ಹಿಂದಕ್ಕೆ ಪಡೆದು ವಜಾಗೊಂಡಿದ್ದರೂ ಕೂಡ, ಒಂದೇ ಸ್ವತ್ತು ಅಥವಾ ವಸ್ತು ವಿಷಯದ ಸಂಬಂಧದಲ್ಲಿ ಎರಡನೇ ದಾವೆಯನ್ನು ಆರಂಭಿಸಲು ಯಾವುದೇ ನಿರ್ಬಂಧವಿರುವುದಿಲ್ಲ.

17. ***ಕೈಲಾಶ್ ನಾಥ್ ಅಗರವಾಲ್ ಮತ್ತು ಇತರರು –ವಿರುದ್ಧ – ಪ್ರದೀಶಿಯಾ ಇಂಡಸ್ಟ್ರಿ ಅಂಡ್ ಇನ್‌ವೆಸ್ಟ್‌ಮೆಂಟ್ ಕಾರ್ಪೋರೇಷನ್ ಆಫ್ ಯು.ಪಿ. ಮತ್ತು ಇನ್ನೊಬ್ಬರು*** [7], ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪು ಪರಿನಿಯಮಗಳ ಅರ್ಥ ವ್ಯಾಖ್ಯೆಯ ತತ್ವಗಳಿಗೆ ಸಂಬಂಧಿಸಿರುತ್ತದೆ. ಒಂದು ಪರಿನಿಯಮದಲ್ಲಿ ಬಳಸಿರುವ ವಿಭಿನ್ನ ಪದಗಳು, ವಿಧಾನ ಮಂಡಲದ ಉದ್ದೇಶವನ್ನು ಅರ್ಥೈಸುವ

7. ಎಐಆರ್ 2003 ಎಸ್‌ಸಿ 1886

ಮೂಲಕ ಮತ್ತು ಬಳಸಲಾದ ವಿಭಿನ್ನ ಪದಗಳು ವಿಭಿನ್ನವಾದ ಅರ್ಥವನ್ನು ನೀಡುತ್ತವೆಂಬ ಆಧಾರದ ಮೇಲೆ ಮೇಲ್ನೋಟದ ನಡಾವಳಿಗಳಿಂದ ಸರಿಯಾದ ಅರ್ಥವನ್ನು ವಹಿಸಿರುತ್ತದೆಂದು ಇದು ನಿರೂಪಿಸುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ಮತ್ತು 3ನೆಯ ನಿಯಮದ VIIನೇ ಕ್ರಮಾದೇಶ, 2 ಮತ್ತು 3ನೇ ನಿಯಮದ II ಕ್ರಮಾದೇಶ, 9ನೇ ನಿಯಮದ XXII ಕ್ರಮಾದೇಶ, 9ನೇ ನಿಯಮದ IX ಕ್ರಮಾದೇಶಗಳಂಥ ಸಂಹಿತೆಯಲ್ಲಿನ ಹಲವಾರು ಉಪಬಂಧಗಳನ್ನು 'ದಾವೆಯ ವಸ್ತು ವಿಷಯ' ಅಥವಾ 'ವ್ಯಾಜ್ಯ ಕಾರಣ' ಅಥವಾ 'ಕ್ಲೇಮಿನ ಭಾಗ'ದ ಅರ್ಥ ವ್ಯಾಖ್ಯೆಗೆ ಉಲ್ಲೇಖಿಸುತ್ತದೆ. ಈ ಅರ್ಥವ್ಯಾಖ್ಯೆಗಳು ಸಾದೃಶವಾದ ಅಥವಾ ಒಂದೇ ಅರ್ಥವನ್ನು ವಹಿಸಲು ಪ್ರತಿಯೊಂದರೊಂದಿಗೂ ಸಮಾನವಾಗಿರಬೇಕಾಗಿರುವುದಿಲ್ಲ.

18. 'ದಾವೆಯ ವಸ್ತು ವಿಷಯ' ಮತ್ತು 'ವ್ಯಾಜ್ಯ ಕಾರಣ' ಪರಿಭಾಷೆಗಳು ಸಿವಿಲ್ ಪ್ರಕ್ರಿಯಾ ಸಂಹಿತೆಯ ಬೇರೆ ಬೇರೆ ಉಪಬಂಧಗಳಲ್ಲಿ ಬಳಸಿರುವುದು ವಾಸ್ತವಾಂಶವಾಗಿದೆ. ಉದಾಹರಣೆಗೆ, ನಿಯಮ 1 ಮತ್ತು 2ರ VII ಕ್ರಮಾದೇಶದಡಿಯಲ್ಲಿ 'ದಾವೆಯ ವಸ್ತು ವಿಷಯ' ಪರಿಭಾಷೆಯನ್ನು VIIನೇ ಕ್ರಮಾದೇಶದ 1ನೇ ನಿಯಮದ (1)ನೇ ಉಪ–ಖಂಡದಲ್ಲಿ ಅಧಿಕಾರ ವ್ಯಾಪ್ತಿ ಮತ್ತು ನ್ಯಾಯಾಲಯ ಶುಲ್ಕಗಳ ಉದ್ದೇಶಕ್ಕಾಗಿ ದಾವೆಯ ವಸ್ತು ವಿಷಯದ ಮೌಲ್ಯಕ್ಕೆ ಸಂಬಂಧಿಸಿದ ವಾದವನ್ನು ಹೇಗೆ ರೂಪಿಸಬೇಕೆಂಬ ವಿವರಣೆಯ ಸಂದರ್ಭಕ್ಕೆ ಅನುಸಾರವಾಗಿ ಮತ್ತು 3ನೇ ನಿಯಮದಲ್ಲಿ ದಾವೆಯ ವಸ್ತು ವಿಷಯವು ಸ್ಥಿರಾಸ್ತಿಯಾಗಿರುವಂಥ ಸರಹದ್ದುಗಳು ಮುಂತಾದವುಗಳನ್ನು ಒದಗಿಸುವ ಮೂಲಕ ಅದರ ಸ್ಪಷ್ಟ ಗುರುತಿಸುವಿಕೆಗೆ ಸಮರ್ಥವಾಗಿಸಲು ಸ್ವತ್ತನ್ನು ವಾದಪತ್ರದಲ್ಲಿ ಹೇಗೆ ವಿವರಿಸತಕ್ಕದ್ದೆಂಬುದನ್ನೂ ಸಂದರ್ಭಕ್ಕೆ ಅನುಸಾರವಾಗಿ ಬಳಸಿಕೊಳ್ಳಲಾಗಿದೆ.

19. ಸಿವಿಲ್ ಪ್ರಕ್ರಿಯಾ ಸಂಹಿತೆಯ XXIII ಆದೇಶದ 1ನೇ ನಿಯಮದ (3) ಮತ್ತು (4)ರ ಉಪ–ನಿಯಮಗಳ ಅಡಿಯಲ್ಲಿನ ಪ್ರಸ್ತುತ ಉಪಬಂಧದಲ್ಲಿ, ವಿಧಾನಮಂಡಲದ ಉದ್ದೇಶವನ್ನು, ದಾವೆಯಲ್ಲಿ ಒಳಗೊಂಡ ಸ್ವತ್ತಿಗೆ ಉಲ್ಲೇಖಿಸಿದಲ್ಲಿ, ಈ ಮೊದಲಿನ ದಾವೆಯನ್ನು ಆರಂಭಿಸಿ, ಅನುಮತಿ ಇಲ್ಲದೆ ಹಿಂದಕ್ಕೆ ಪಡೆದುದಕ್ಕೆ ಸಂಬಂಧಿಸಿದಂತೆ, ಅದೇ ಸ್ವತ್ತಿನ ಸಂಬಂಧದಲ್ಲಿ ಯಾವುದೇ ಎರಡನೇ ದಾವೆಯನ್ನು

ಹೂಡಬಾರದೆಂಬುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ 1 ಮತ್ತು 3ನೇ ನಿಯಮಗಳ VIIನೇ ಮತ್ತು 1ನೇ ನಿಯಮದ (3) ಮತ್ತು (4) ಉಪ–ಪ್ರಕರಣಗಳ XXIII ಕ್ರಮಾದೇಶಗಳಂಥ ಅಕ್ಕಪಕ್ಕದ ಅಥವಾ ಇತರೆ ಸಾದೃಶ ಉಪಬಂಧಗಳು, ದಾವೆಯಲ್ಲಿ ಒಳಗೊಂಡ ಸ್ವತ್ತಿಗೆ 'ದಾವೆಯ ವಸ್ತು ವಿಷಯ' ಅಥವಾ 'ಕ್ಲೇಮಿನ ಭಾಗ'ದ ಅಭಿವ್ಯಕ್ತಿಯ ಬಳಕೆಯ ಹಿಂದಿನ ಉದ್ದೇಶವನ್ನು ದೃಢೀಕರಿಸುವ ಪ್ರಯತ್ನದಲ್ಲಿ ನೆರವು ನೀಡುವುದಿಲ್ಲ. ಅಂತೆಯೇ, 'ವ್ಯಾಜ್ಯ ಕಾರಣ'ದ ಅಭಿವ್ಯಕ್ತಿಯನ್ನು ಉಲ್ಲೇಖಿಸುವ 9ನೇ ನಿಯಮದ IXನೇ ಕ್ರಮಾದೇಶ ಮತ್ತು 9ನೇ ನಿಯಮದ XXIIನೇ ಕ್ರಮಾದೇಶದಡಿಯಲ್ಲಿ ಬಳಸಿರುವ ಅರ್ಥ ವ್ಯಾಖ್ಯೆಯು, ಸಿವಿಲ್ ಪ್ರಕ್ರಿಯಾ ಸಂಹಿತೆಯ XXIIIನೇ ಕ್ರಮಾದೇಶದ 1ನೇ ನಿಯಮದ (3) ಮತ್ತು (4)ನೇ ಉಪ–ನಿಯಮಗಳಲ್ಲಿ ಒಳಗೊಂಡ ಉಪಬಂಧಗಳ ಹಿಂದಿನ ನಿಜವಾದ ಧ್ಯೇಯ ಮತ್ತು ಉದ್ದೇಶವನ್ನು ಅರ್ಥೈಸಿಕೊಳ್ಳುವಲ್ಲಿ ನೆರವು ನೀಡುವುದಿಲ್ಲ.

20. ಇದಕ್ಕೆ ಸಂಬಂಧಿಸಿದ ಇತರೆ ತೀರ್ಪುಗಳನ್ನೂ ಸಹ ಮಾನ್ಯ ನ್ಯಾಯವಾದಿಗಳಾದ ಶ್ರೀ ರವಿಶಂಕರ್‌ರವರು ಉದಾಹರಿಸಿದ್ದು, ಅವುಗಳು ನ್ಯಾಯಾಲಯದ ಅನುಮತಿ ಕೋರದೆ, ಈ ಮೊದಲ ದಾವೆಯನ್ನು ಪರಿತ್ಯಜಿಸಿ, ಹೊಸ ದಾವೆಯನ್ನು ಆರಂಭಿಸಿರುವುದರಿಂದ ವಾದಿಯನ್ನು ಪ್ರತಿವಾರಿಸುವುದರ ಹಿಂದಿನ ಧ್ಯೇಯ ಮತ್ತು ಉದ್ದೇಶಗಳ ಮೇಲೆ ಬೆಳಕು ಚೆಲ್ಲಿರುವುದರಲ್ಲಿ ಯಾವುದೇ ಸಂಶಯವಿರುವುದಿಲ್ಲ. ಸಾರ್ವಜನಿಕ ನೀತಿಗೆ ವಿರುದ್ಧವಾಗಿರುವಂಥ ಮತ್ತೆ ಮತ್ತೆ, ಒಂದೇ ವ್ಯಾಜ್ಯ ಅಥವಾ ಒಂದೇ ಕ್ಲೇಮಿಗೆ ಸ್ವತಃ ಪ್ರತಿ ರಕ್ಷಿಸಿಕೊಳ್ಳುವ ಹೊಣೆಗಾರಿಕೆಗಳೊಂದಿಗೆ ಆತನ ಎದುರು ಪಕ್ಷಕಾರನಿಗೆ ಕ್ಲೇಶವುಂಟು ಮಾಡಲು ವಾದಿಯನ್ನು ಸಮರ್ಥಗೊಳಿಸದ ಹೊರತು, ಅಂಥ ಗುರುತರವಾದ ಉಪಬಂಧಗಳ ಗೌರವ ಪೂರ್ವಕ ಆಕ್ಷೇಪಣೆಗಳನ್ನು ಕುರಿತಂತೆ ಯಾವುದೇ ಎರಡನೇ ಅಭಿಪ್ರಾಯವಿರುವುದಿಲ್ಲ. ಪಕ್ಷಕಾರರ ನಡುವಿನ ವಿವಾದಗಳನ್ನು ಬಗೆಹರಿಸುವ ಮತ್ತು ನ್ಯಾಯ ನಿರ್ಣಯಿಸುವ ಉದ್ದೇಶವನ್ನು ಹೊಂದಿರುವಂಥ ನ್ಯಾಯಾಲಯಗಳನ್ನು, ಪ್ರತಿವಾದಿಗಳಿಗೆ ಕಿರುಕುಳ ಕೊಡುವ ಉದ್ದೇಶವನ್ನು ಹೊಂದಿರುವ ಅಂಥ ವಾದಿಗಳ ಮೂಲಕ ಅಂಥ ಕ್ಲೇಮುಗಳನ್ನು ಬಗೆಹರಿಸಲು ಅವರನ್ನು ನಿರತಗೊಳಿಸುವ ಮೂಲಕ ದುರುಪಯೋಗಪಡಿಸಿಕೊಳ್ಳಲಾಗುವುದಿಲ್ಲ.

21. ಆದರೆ, ಪ್ರಸ್ತುತ ಪ್ರಕರಣದಲ್ಲಿ ಎದುರಾದ ಪರಿಸ್ಥಿತಿಯು ಸಂಪೂರ್ಣ ಭಿನ್ನವಾಗಿದೆ. ಮರು ಅರ್ಜಿ ಸಲ್ಲಿಸುವ ಮೂಲಕ, ವಾದಿಗಳು ಈ ಕ್ಲೇಮು ಮಾಡಿದ ಹಕ್ಕು, ಸ್ವತ್ತಿನ ಮೇಲೆ ವಾದಿಗಳಾಗಿರುವ ನಿರುಪಾಧಿಕ ಹಕ್ಕನ್ನು ಆಧರಿಸಿರುತ್ತದೆಯೇ ಹೊರತು ಕುಟುಂಬದ ಎಲ್ಲಾ ಇತರೆ ಸದಸ್ಯರ ಜಂಟಿ ಹಕ್ಕುಗಳನ್ನು ಒಪ್ಪಿಕೊಂಡ ಪಾಲಿನ ಪರಿಹಾರವಾಗಿರುವುದಿಲ್ಲವೆಂಬುದನ್ನು ಹೇಳಲೇ ಬೇಕಾಗಿರುತ್ತದೆ.

22. ಈ ಸಂದರ್ಭವನ್ನು ನಿಭಾಯಿಸುವಾಗ, ಮಧ್ಯೆ ಬಂದ ವಾಸ್ತವಾಂಶಗಳು ಯಾವುವು ಮತ್ತು ವಾದಿ ಅವುಗಳಿಗೆ ಹೇಗೆ ತಕ್ಷಣದ ಪರಿಹಾರವನ್ನು ಕೋರಿದನು ಎಂಬುದನ್ನು ಅವಶ್ಯಕ ವಿವಾದಾಂಶಗಳನ್ನು ರೂಪಿಸಿಕೊಳ್ಳುವ ಮೂಲಕ ಅಧಿವಿಚಾರಣೆ ಸಮಯದಲ್ಲಿ ತನಿಖೆ ಮಾಡಲಾಯಿತು. ವಾಸ್ತವವಾಗಿ, ಪ್ರತಿವಾದಿಗಳು, ಎರಡನೇ ದಾವೆಯನ್ನು ಊರ್ಜಿತಗೊಳಿಸಿಕೊಳ್ಳಲು ಕಾನೂನು ನಿಷೇದವನ್ನು ಒತ್ತಿ ಹೇಳಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 2ನೇ ನಿಯಮದ II ಕ್ರಮಾದೇಶದಡಿಯಲ್ಲಿ ಒಳಗೊಂಡ ಉಪಬಂಧಗಳನ್ನು ಉಲ್ಲೇಖಿಸುವ ಮೂಲಕ ರಕ್ಷಣೆಯನ್ನು ಪಡೆದಿರುತ್ತಾರೆ. ಆದ್ದರಿಂದ ಅಧಿವಿಚಾರಣೆಯ ಸಮಯದಲ್ಲಿ ಈ ಸಂಬಂಧದಲ್ಲಿ ತೆಗೆದುಕೊಂಡ ಪ್ರತಿರಕ್ಷೆಯನ್ನು ಸುಸ್ಥಾಪಿಸಲು ಪ್ರತಿವಾದಿಗಳ ಹಕ್ಕಿಗೆ ಪೂರ್ವಾಗ್ರಹವಿಲ್ಲದೆ, ಈ ಅರ್ಜಿಯನ್ನು, ಅಧೀನ ನ್ಯಾಯಾಲಯವು ಹೊರಡಿಸಿರುವ ಆದೇಶವನ್ನು ಸ್ಥಿರೀಕರಿಸಿ ವಜಾಗೊಳಿಸಿರುತ್ತದೆ.

23. ಪ್ರಸ್ತುತ ಆದೇಶವನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ XXIII ಆದೇಶದ 1ನೇ ನಿಯಮದ (3) ಮತ್ತು (4)ನೇ ಉಪ ನಿಯಮಗಳಲ್ಲಿ ಬಳಸಲಾದ 'ದಾವೆಯ ವಸ್ತು ವಿಷಯ' ಅಥವಾ 'ಕ್ಲೇಮಿನ ಭಾಗ'ದ ಪರಿಭಾಷೆಗಳ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಮಾತ್ರ ಹೊರಡಿಸಲಾಗಿದೆಯೆಂಬುದನ್ನು ಸ್ಪಷ್ಟವಾಗಿ ರೂಪಿಸಲಾಗಿರುತ್ತದೆ ಮತ್ತು ಗುಣಾರ್ಹತೆಗಳಿಗೆ ಉಲ್ಲೇಖಿಸಿರುವ ಎಲ್ಲಾ ಇತರೆ ವಾದಗಳನ್ನು ಮುಕ್ತವಾಗಿ ಇಡಲಾಗಿರುತ್ತದೆ.